JUNE 22, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಧಾರವಾಡ ಜಿಲ್ಲೆ, ಕುಂದಗೋಳದ,** ದೇವಧಾನ್ಯ ರೈತ ಉತ್ಪಾದಕರ ಕಂಪೆನಿಯ, 'ಹುಬ್ಬಳ್ಳಿ ಹಲಸು ಮೇಳ', ಯಶಸ್ವಿ.
- **ಹೊರನಾಡ ಕನ್ನಡಿಗರ ಸಂಘಗಳ,** 10ನೇ ಮಹಾಮೇಳ, ಸೋಲಾಪುರದಲ್ಲಿ ಸಂಪನ್ನ.
- **ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ,** ಇಂದು, ಆಕಾಶವಾಣಿ ಧಾರವಾಡ ಕೇಂದ್ರದಲ್ಲಿ, 'ಸಾಹಿತ್ಯಾಂತರಂಗ' ಕಾರ್ಯಕ್ರಮ.
- **ಮಧ್ಯಸ್ಥಿಕೆ, ಕೇವಲ ಆಯ್ಕೆಯಲ್ಲ;** ಶಾಸನಬದ್ಧ ಆದೇಶ – ನ್ಯಾಯಮೂರ್ತಿ ಆರ್.ನಟರಾಜ.

<><><>

**ಈಗ ವಾರ್ತೆಗಳ ವಿವರ**

<><><>

**ಧಾರವಾಡ ಜಿಲ್ಲೆ, ಕುಂದಗೋಳ ತಾಲೂಕು,** ತೀರ್ಥ ಗ್ರಾಮದ, ದೇವಧಾನ್ಯ ರೈತ ಉತ್ಪಾದಕರ ಕಂಪೆನಿ, ಮೈಸೂರಿನ ಸಹಜ ಸಮೃದ್ಧ ಸಂಸ್ಥೆ ಸಹಯೋಗದಲ್ಲಿ, ಹುಬ್ಬಳ್ಳಿಯ ಅರ್ಬನ್ ಓಯಾಸಿಸ್ ಮಾಲ್‌ನಲ್ಲಿ ಆಯೋಜಿಸಿದ್ದ, 'ಹುಬ್ಬಳ್ಳಿ ಹಲಸು ಮೇಳ', ದಾಖಲೆಯ 5 ಲಕ್ಷ ರೂಪಾಯಿ ವಹಿವಾಟು ಮೂರು ದಿನಗಳಲ್ಲಿ ದಾಖಲಿಸಿದೆ. ನಾಲ್ಕು ಸಾವಿರಕ್ಕೂ ಹೆಚ್ಚು ಜನ ಭೇಟಿ ನೀಡಿದ್ದಾರೆ.

<><><>

**ಈ ಕುರಿತು ಒಂದು ವರದಿ..**

<><><>

***ಕೇಂದ್ರ ಪುರಸ್ಕೃತ, ಪ್ರಧಾನಮಂತ್ರಿಗಳ ಕಿರು ಆಹಾರ ಉದ್ಯಮಗಳ, ನಿಯಮಬದ್ಧ ಗೊಳಿಸುವಿಕೆ ಯೋಜನೆ – ಪಿ.ಎಂ. ಎಫ್.ಎಂ.ಇ. ಅಡಿ, ರೈತರಿಂದ, ರೈತರಿಗಾಗಿ, ಕೃಷಿಕ ಮಹಿಳೆಯರು, ತಮ್ಮ ಸಾರಥ್ಯದ, ಉತ್ಪಾದಕರ ಕಂಪೆನಿಗಳಲ್ಲಿ ತಯಾರಿಸಿದ, ಹಲಸಿನ ಮೌಲ್ಯ ವರ್ಧಿತ ಉತ್ಪನ್ನಗಳು, ರಾಜ್ಯದ ವಿವಿಧ ಭಾಗಗಳ, ವಿಶಿಷ್ಟ ರುಚಿ ಹಾಗೂ ಬಣ್ಣಗಳ, ಹಲಸು ತಳಿಗಳ, 20ಕ್ಕೂ ಹೆಚ್ಚು ಬೆಳೆಗಾರರು ತಂದಿದ್ದ, ಎಲ್ಲ ಹಲಸಿನ ಸಸಿಗಳು, ಹುಬ್ಬಳ್ಳಿ ಹಲಸು ಮೇಳದಲ್ಲಿ, ಮಾರಾಟವಾಗಿದ್ದು ವಿಶೇ ’. ಸಿರಿಧಾನ್ಯಗಳ ಖಾದ್ಯ–ತಿನಿಸುಗಳು, ದೇಸಿ ತರಕಾರಿ, ಹಣ್ಣು ಮತ್ತು ಜವಾರಿ ಕಾಳುಗಳ ಬೀಜ ಜಾತ್ರೆ ಗಮನ ಸೆಳೆಯಿತು. ಹಲಸು ಮತ್ತು ಮಾವಿನ ಅಡುಗೆ ಸ್ಪರ್ಧೆಯಲ್ಲಿ, ಧಾರವಾಡ ಹಾಗೂ ಗದಗ ಜಿಲ್ಲೆಗಳ ಮಹಿಳೆಯರು ಭಾಗವಹಿಸಿದ್ದರು. ಹುಬ್ಬಳ್ಳಿಯ***

***ಶೀಲಾ ಶ್ರೀಕಾಂತ, ಮೊದಲ ಬಹುಮಾನ ಪಡೆದರು. ಹಲಸಿನ ಚಿತ್ರಕಲಾ ಸ್ಪರ್ಧೆಯಲ್ಲಿ, ಪಿಹು ಪ್ರದೀಪ ಕಬಾಡೆ ಪ್ರಥಮ ಸ್ಥಾನ ಗಳಿಸಿದರು. ಹುಬ್ಬಳ್ಳಿ ಹಲಸಿನ ಮೇಳದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಸಹಜ ಸಮೃದ್ಧದ ವಿಶ್ವಸ್ಥ, ಮಲ್ಲಿಕಾರ್ಜುನ ಹೊಸಪಾಳ್ಯ.***

<><><>

**ವಿವೇಕ ಧ್ವನಿ (56) + ಮಲ್ಲಿಕಾರ್ಜುನ ಹೊಸಪಾಳ್ಯ ಧ್ವನಿ (45) ಸೆಕೆಂದುಗಳು**

<><><>

**ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ,** ಸೋಲಾಪುರ ಜಿಲ್ಲೆಯ ಕನ್ನಡ ಸಂಘಗಳ ಸಹಯೋಗದಲ್ಲಿ, ಸೋಲಾಪುರದ ಹುತಾತ್ಮ ಸ್ಮೃತಿ ಮಂದಿರದಲ್ಲಿ, ಆಯೋಜಿಸಿದ್ದ, ಹೊರನಾಡ ಕನ್ನಡಿಗರ ಕನ್ನಡ ಸಂಘಗಳ, 10ನೇ ಮಹಾಮೇಳ, ವಾರದ ಮಲ್ಲಪ್ಪನವರ ಮೊಮ್ಮಗಳು, ಜಯದೇವಿತಾಯಿ ಲಿಗಾಡೆ ಅವರ ಹೆಸರಿನಲ್ಲಿ, ಪುರಸ್ಕಾರ ಸ್ಥಾಪಿಸಬೇಕು ಎಂಬ, ಒತ್ತಾಸೆಯೊಂದಿಗೆ, ಸಂಪನ್ನಗೊಂಡಿತು. ತಮಿಳುನಾಡು, ಆಂಧ್ರಪ್ರದೇಶ, ಕೇರಳ, ಗೋವಾ, ಮಧ್ಯಪ್ರದೇಶ, ಹೊಸ ದಿಲ್ಲಿ, ಗುಜರಾತ, ಕರ್ನಾಟಕ, ಮಹಾರಾಷ್ಟ್ರ ಹಾಗೂ ಸೋಲಾಪುರ ಜಿಲ್ಲೆಯ, ಕನ್ನಡ ಸಂಘಗಳ, 600ಕ್ಕೂ ಹೆಚ್ಚು ಪ್ರತಿನಿಧಿಗಳು, ಈ ಮಹಾಮೇಳದಲ್ಲಿ ಪಾಲ್ಗೊಂಡಿದ್ದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ ಅವರು, ಮಹಾಮೇಳದಲ್ಲಿ ಕೈಗೊಳ್ಳಲಾದ ನಿರ್ಣಯಗಳ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

**ಬಸವಪ್ರಭು ಹೊಸಕೇರಿ ಧ್ವನಿ 56 ಸೆಕೆಂದುಗಳು**

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಭಾರತ ಸರ್ಕಾರದ,** ಕೇಂದ್ರ ಸಂಸ್ಕೃತಿ ಸಚಿವಾಲಯ, ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಆಕಾಶವಾಣಿ ಧಾರವಾಡ ಕೇಂದ್ರದ ಸಹಯೋಗದಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ಶಾಲ್ಮಲಾ ಸಭಾಂಗಣದಲ್ಲಿ, 'ಸಾಹಿತ್ಯಾಂತರಂಗ' ಕಾರ್ಯಕ್ರಮ ಆಯೋಜಿತವಾಗಿದೆ. ಆಕಾಶವಾಣಿ ಧಾರವಾಡ ಕೇಂದ್ರದ, ತಾಂತ್ರಿಕ ವಿಭಾಗದ ಉಪ ಮಹಾನಿರ್ದೇಶಕ ಹಾಗೂ ಕೇಂದ್ರದ ಮುಖ್ಯಸ್ಥರಾದ, ಕೆ.ಅರುಣ ಪ್ರಭಾಕರ, ಸಾಹಿತ್ಯ ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮ ಮುಖ್ಯಸ್ಥರಾದ, ಮಂಜುಳಾ ಪುರಾಣಿಕ ಪಾಲ್ಗೊಳ್ಳಲಿದ್ದಾರೆ. ಸಮಾರೋಪ ನುಡಿಗಳನ್ನಾಡಲಿರುವ, ಕೇಂದ್ರ ಸಾಹಿತ್ಯ ಅಕಾಡೆಮಿ ಸಲಹಾ ಸಮಿತಿ ಸದಸ್ಯ, ಡಾಕ್ಟರ್ ಬಸವರಾಜ ಸಾದರ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

**ಡಾಕ್ಟರ್ ಬಸವರಾಜ ಸಾದರ ಧ್ವನಿ 59 ಸೆಕೆಂದುಗಳು**

<><><>

**ವ್ಯಾಜ್ಯ ತೀರ್ಮಾನದಲ್ಲಿ,** ಮಧ್ಯಸ್ಥಿಕೆ, ಈಗ ಕೇವಲ ಒಂದು ಆಯ್ಕೆಯಾಗಿ ಉಳಿದಿಲ್ಲ; ಅದೊಂದು ಶಾಸನಬದ್ಧ ಆದೇಶವಾಗಿದೆ. ಪ್ರಕರಣಗಳನ್ನು ಮಧ್ಯಸ್ಥಿಕೆಗೆ ಒಪ್ಪಿಸುವ ಮೂಲಕ, ನ್ಯಾಯಾಲಯದ ಹೊರೆಯನ್ನು ಗಣನೀಯವಾಗಿ ತಗ್ಗಿಸಬಹುದು ಎಂದು, ರಾಜ್ಯ ಹೈಕೋರ್ಟ್ ಹಾಗೂ ಬಳ್ಳಾರಿ ಜಿಲ್ಲೆ ಆಡಳಿತಾತ್ಮಕ ನ್ಯಾಯಮೂರ್ತಿ ಆರ್.ನಟರಾಜ ತಿಳಿಸಿದ್ದಾರೆ. ಬಳ್ಳಾರಿಯಲ್ಲಿ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬಳ್ಳಾರಿ, ವಿಜಯನಗರ ಹಾಗೂ ಕೊಪ್ಪಳ ಜಿಲ್ಲೆಗಳ ನ್ಯಾಯಾಧೀಶರಿಗೆ, ಮಧ್ಯಸ್ಥಿಕೆ ಕುರಿತ, ಪುನಃಶ್ಚೇತನ ತರಬೇತಿ ಕಾರ್ಯಾಗಾರವನ್ನು, ಆನ್ಲೈನ್ ವೇದಿಕೆಯಲ್ಲಿ ಉದ್ಘಾಟಿಸಿ, ಅವರು ಮಾತನಾಡಿದರು. ಮಧ್ಯಸ್ಥಿಕೆಯನ್ನು ಕಾನೂನು ಬದ್ಧಗೊಳಿಸಲಾಗಿದೆ. ಕಕ್ಷಿದಾರರ ನಡುವೆ ಸಂಧಾನ ಮೂಡಿಸುವಲ್ಲಿ, ನ್ಯಾಯಾಧೀಶರ ಪಾತ್ರ ಅತ್ಯಂತ ಪ್ರಮುಖವಾಗಿದೆ ಎಂದರು.

<><><>

**"ನಿಮ್ಮೊಳಗಿನ ಅರಣ್ಯ",** ಧ್ಯೇಯದೊಂದಿಗೆ, ಇಂದು, ವಿಶ್ವ ಮಳೆಕಾಡು ದಿನಾಚರಣೆ. ಭೂ ಗ್ರಹದ ಹವಾಮಾನವನ್ನು ಸ್ಥಿರಗೊಳಿಸುವಲ್ಲಿ, ಶ್ರೀಮಂತ ಜೀವವೈವಿಧ್ಯತೆಯನ್ನು ಪೋಷಿಸುವಲ್ಲಿ ಹಾಗೂ ಸ್ಥಳೀಯ ಸಮುದಾಯಗಳನ್ನು ಸುಸ್ಥಿರಗೊಳಿಸುವಲ್ಲಿ, ಮಳೆಕಾಡುಗಳ ನಿರ್ಣಾಯಕ ಪಾತ್ರದ ಬಗ್ಗೆ, ಜನ ಜಾಗೃತಿ ಮೂಡಿಸಲಾಗುತ್ತಿದೆ. "ಜೀವಂತ ಔ 'ಧಾಲಯಗಳು" ಎಂದೇ ಪರಿಗಣಿತವಾದ, ಮಳೆ ಕಾಡುಗಳು, ಗಣನೀಯ ಪ್ರಮಾಣದಲ್ಲಿ, ಇಂಗಾಲದ ಡೈ ಆಕ್ಸೈಡ್‌ನ್ನು ಹೀರಿಕೊಂಡು, ಜಾಗತಿಕ ಮಳೆ ಮಾದರಿಗಳನ್ನು ನಿಯಂತ್ರಿಸುತ್ತವೆ.

<><><>

**ಉತ್ತರಕನ್ನಡ ಜಿಲ್ಲೆ, ಯಲ್ಲಾಪುರ ತಾಲೂಕಿನ,** ಗ್ರಾಮೀಣ ಭಾಗದ, 41 ವ ್ಷದ ಕೃಷಿ ಕೂಲಿ ಕಾರ್ಮಿಕರೋರ್ವರು, ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು, ಹಂದಿಜ್ವರ ದೃಢಪಟ್ಟಿದ್ದಾಗಿ, ಯಲ್ಲಾಪುರ ತಾಲೂಕು ವೈದ್ಯಾಧಿಕಾರಿ, ಡಾಕ್ಟರ್ ನರೇಂದ್ರ ಪವಾರ ತಿಳಿಸಿದ್ದಾರೆ. ವ್ಯಕ್ತಿಯ ಕುಟುಂಬಸ್ಥರನ್ನೂ ಚಿಕಿತ್ಸೆಗೆ ಒಳಪಡಿಸಲಾಗಿದ್ದು, ಮುಂಜಾಗ್ರತೆ ವಹಿಸಲು ಸೂಚಿಸಲಾಗಿದೆ ಎಂದು, ಜಿಲ್ಲಾ ಸಾಂಕ್ರಾಮಿಕ ರೋಗಗಳ ಸರ್ವೇಕ್ಷಣಾಧಿಕಾರಿ, ಡಾಕ್ಟರ್ ರಮೇಶ ರಾವ್ ಮಾಹಿತಿ ನೀಡಿದ್ದಾರೆ.

<><><>

**ಕರ್ನಾಟಕ ಈಜುಪಟುಗಳ ತಂಡ,** ಅಹಮದಾಬಾದ್ ನಲ್ಲಿ ನಿನ್ನೆ ಮುಕ್ತಾಯಗೊಂಡ, 79ನೇ ರಾಷ್ಟ್ರೀಯ ಈಜು ಚಾಂಪಿಯನ್ ಶಿಪ್ ನಲ್ಲಿ, ಸಮಗ್ರ ವೀರಾಗ್ರಣಿ ಪ್ರಶಸ್ತಿಗೆ ಭಾಜನವಾಗಿದೆ. 33 ವರ್ಷಗಳ ಪ್ರಾಬಲ್ಯ ಮೆರೆದಿದೆ. 6 ದಿನಗಳ ಈಜು ಕೂಟದಲ್ಲಿ, ಕರ್ನಾಟಕ ಒಟ್ಟು 19 ಚಿನ್ನ, 16 ಬೆಳ್ಳಿ, 11 ಕಂಚಿನ ಪದಕಗಳ ಸಹಿತ, ಒಟ್ಟು 47 ಪದಕಗಳನ್ನು, ಜಯಿಸಿದೆ. ಪುರುಷರ ಹಾಗೂ ಮಹಿಳಾ ಈಜು ಸ್ಪರ್ಧೆಗಳಲ್ಲಿ, ಒಟ್ಟು 170 ಅಂಕ ಗಳಿಸಿದ ಕರ್ನಾಟಕ ತಂಡ, ಸಮಗ್ರ ಪ್ರಶಸ್ತಿ ಜಯಿಸಿತು. ಕೊನೆ ದಿನವಾದ ನಿನ್ನೆ, ಕರ್ನಾಟಕದ ನೀನಾ ವೆಂಕಟೇಶ, ಮಹಿಳೆಯರ 50 ಮೀಟರ್ ಬಟರ್ ಫ್ಲೈ ವಿಭಾಗದಲ್ಲಿ, ಕೂಟ ದಾಖಲೆ ನಿರ್ಮಿಸಿದರು. 27 ದಶಾಂಶ 6–7 ಸೆಕೆಂದುಗಳಲ್ಲಿ, ಈಜಿ, 2023ರಲ್ಲಿ ತಾವೇ ನಿರ್ಮಿಸಿದ್ದ ದಾಖಲೆಯನ್ನು, ಮುರಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಧಾರವಾಡ ಜಿಲ್ಲೆ, ಕುಂದಗೋಳದ,** ದೇವಧಾನ್ಯ ರೈತ ಉತ್ಪಾದಕರ ಕಂಪೆನಿಯ, 'ಹುಬ್ಬಳ್ಳಿ ಹಲಸು ಮೇಳ', ಯಶಸ್ವಿ.
- **ಹೊರನಾಡ ಕನ್ನಡಿಗರ ಸಂಘಗಳ,** 10ನೇ ಮಹಾಮೇಳ, ಸೋಲಾಪುರದಲ್ಲಿ ಸಂಪನ್ನ.
- **ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ,** ಇಂದು, ಆಕಾಶವಾಣಿ ಧಾರವಾಡ ಕೇಂದ್ರದಲ್ಲಿ, 'ಸಾಹಿತ್ಯಾಂತರಂಗ' ಕಾರ್ಯಕ್ರಮ.
- **ಮಧ್ಯಸ್ಥಿಕೆ, ಕೇವಲ ಆಯ್ಕೆಯಲ್ಲ;** ಶಾಸನಬದ್ಧ ಆದೇಶ – ನ್ಯಾಯಮೂರ್ತಿ ಆರ್.ನಟರಾಜ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>